# ಹಾಡು, ಸಾಹಿತ್ಯ–ಸಂಯೋಜನೆಯ ಸಾವಯವ ಶಿಲ್ಪ



**ಚರಣ್ ರಾಜ್**

ಟ್ಯೂನ್‌ಗೆ ಮುಖ್ಯ ಪ್ರೇರಣೆ ಕಥೆಯೇ ಆಗಿರುತ್ತದೆ. ಕಥೆ, ಸಂದರ್ಭ ಮತ್ತು ಪಾತ್ರ ಈ ಮೂರು ಅಂಶಗಳನ್ನು ಆಧರಿಸಿಯೇ ಟ್ಯೂನ್ ಹುಟ್ಟುವುದು.

ಸಾಮಾನ್ಯವಾಗಿ ಒಂದು ಸಿನಿಮಾಗೆ ಸಂಗೀತ ಸಂಯೋಜನೆ ಮಾಡಬೇಕು ಎಂದಾಗ ನಾನು ಏನೂ ಸಿದ್ಧತೆ ನಡೆಸಿರುವುದಿಲ್ಲ. ಸಾಧ್ಯವಾದಷ್ಟೂ ಸಾವಯವವಾಗಿ, ಸ್ಪಾಂಟೇನಿಯಸ್ ಆಗಿ ಸಂಯೋಜನೆ ಮಾಡಲು ಪ್ರಯತ್ನಿಸುತ್ತೇನೆ. ಆ ಕಥೆ ಮತ್ತು ಪಾತ್ರಗಳನ್ನು ನೆನಪಿಸಿಕೊಂಡೇ ಟ್ಯೂನ್ ಕಟ್ಟುತ್ತೇನೆ. ಆ ಪಾತ್ರ ಎಲ್ಲಿರುತ್ತದೆ, ಏನು ಮಾಡುತ್ತಿರುತ್ತದೆ, ಅದರ ಸುತ್ತಲಿನ ವಾತಾವರಣ ಎಂಥದ್ದು ಎನ್ನುವುದೂ ನನಗೆ ತುಂಬ ಮುಖ್ಯವಾಗುತ್ತದೆ. ಆ ವಾತಾವರಣವನ್ನೂ ಒಳಗೊಂಡೇ ನಾನು ಟ್ಯೂನ್ ಬಗ್ಗೆ ಯೋಚಿಸುವುದು.

ಈ ಮೇಲಿನ ಎಲ್ಲ ಅಂಶಗಳೂ ನಾನು ಸಂಗೀತ ಸಂಯೋಜಿಸುವಾಗ ತುಂಬ ಮುಖ್ಯ ಪಾತ್ರ ವಹಿಸುತ್ತವೆ. ಇವುಗಳ ಜತೆಗೆ ಇನ್ನೊಂದು ಅಂಶವೂ ಇದೆ. ಸಾಮಾನ್ಯವಾಗಿ ನಿರ್ದೇಶಕರು ಕಥೆಯನ್ನು ಬರೆಯುವಾಗ ಯಾವುದೋ ಸಂಗೀತ ಕೇಳುತ್ತಿರುತ್ತಾರೆ. ಯಾವುದೋ ಬಗೆಯ ಸಂಗೀತ ಅವರ ಮನಸಲ್ಲಿರುತ್ತದೆ. ಆ ಸಂಗೀತ ಯಾವುದು ಎಂದು ನಾನು ಕೇಳಿಕೊಳ್ಳುತ್ತೇನೆ. ಯಾಕೆಂದರೆ ಅವರಿಗೆ ಆ ಮ್ಯೂಸಿಕ್ ತುಂಬ ಪ್ರಭಾವ ಬೀರಿರುತ್ತದೆ; ಕಾಡಿರುತ್ತದೆ. ಅದು ಆ ಸಂಗೀತವನ್ನು ಕಾಪಿ ಮಾಡಲಿಕ್ಕಲ್ಲ. ಬದಲಿಗೆ ಅವರ ಮನಸಲ್ಲಿ ಇರುವ ಸಂಗೀತದ ಜಾನರ್ ಯಾವುದು ಎಂಬುದನ್ನು ತಿಳಿದುಕೊಳ್ಳಲಿಕ್ಕಾಗಿ. ಆ 'ಸ್ಟೈಲ್', ಟೆಂಪೊ, ಫೇಸ್ ಅನ್ನು ನಾನು ತಿಳಿದುಕೊಳ್ಳುತ್ತೇನೆ. ಇವೆಲ್ಲ ಆದಮೇಲೆ ಮುಂದಿನದು ನನ್ನ ಮನೋಧರ್ಮವನ್ನು ಅವಲಂಬಿಸಿ ಕೆಲಸ ಮಾಡುವುದು.

ಯಾವುದಾದರೂ ರಾಗದ ಮೇಲೆ ಟ್ಯೂನ್ ಮಾಡುವುದಾ ಅಥವಾ ವೆಸ್ಟರ್ನ್ ಶೈಲಿಯಲ್ಲಿ ಸಂಯೋಜಿಸುವುದಾ ಎಂದು ನಿರ್ಧರಿಸುತ್ತೇನೆ. ಅದಕ್ಕೆ ಇಂಥದ್ದೇ ರೂಲ್ ಅಂತೇನೂ ಇಲ್ಲ. ತುಂಬ ಸಾವಯವವಾಗಿಯೇ ಅದು ಬರುತ್ತದೆ.

ಒಂದು ಸಿನಿಮಾಗೆ ಸಂಗೀತ ಸಂಯೋಜಿಸುವಾಗ ಸಾಧ್ಯವಾದಷ್ಟೂ ವ್ಯವಸ್ಥಿತವಾಗಿ ಕೂತು ಕೆಲಸ ಮಾಡಲು ಪ್ರಯತ್ನಿಸುತ್ತೇನೆ. ಕೆಲವು ಸಲ ಎಷ್ಟು ಪ್ರಯತ್ನಿಸಿದರೂ ಟ್ಯೂನ್ ಹೊಳೆಯುವುದಿಲ್ಲ. ಆಗ ನಾನು ಒಂದು ಬ್ರೇಕ್ ತಗೋತಿನಿ. ಆಗ ಟ್ರಾವೆಲ್ ಮಾಡುವಾಗೆಲ್ಲ ಟ್ಯೂನ್ ಹೊಳೆದಿರುವುದೂ ಇದೆ.